ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .

ಸಿ.ಸಿ.ನಂ. 820/2015

ಸಾಕ್ಷಿದಾರರ ಹೆಸರು	:	ಶ್ರೀನಿವಾಸ ಕೆ
ತಂದೆಯ ಹೆಸರು	:	ಕುಳ್ಳೇಗೌಡ
ವಯಸ್ಸು	:	63 ವರ್ಷ
ಉದ್ಯೋಗ	:	ನಿವೃತ್ತ ಕಾರ್ಯಪಾಲಕ ಅಭಿಯಂತರರು
ವಾಸಸ್ಥಳ	:	ಮೈಸೂರು.

ಸಾಕ್ಷಿಯನ್ನು ದಿನಾಂಕಃ 24.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ನಾನು 2014 ರಿಂದ 2017 ರವರೆಗೆ ಹುಲ್ಲಹಳ್ಳಿ ಕಬಿನಿ ನಾಲಾ ಉಪ-ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಹಾಡ್ಯ ಗ್ರಾಮದಲ್ಲಿರುವ ಸರ್ವೆ ನಂ. 127 ರ ಜಮೀನಿನಲ್ಲಿ 2 ನೇ ಆರೋಪಿ ಪಕ್ಕದ ಜಮೀನಿನವರಿಗೆ ಸರ್ಕಾರಿ ಪರಿವೀಕ್ಷಣಾ ದಾರಿಯಲ್ಲಿ ಹೋಗಲು ಅವಕಾಶ ಕೊಡುತ್ತಿರಲಿಲ್ಲ. ನಂತರ ಅವರು ನಮ್ಮ ಕಛೇರಿಗೆ ದೂರು ನೀಡಿದಾಗ ಪರಿಶೀಲಿಸಲು ಸ್ಥಳಕ್ಕೆ ಹೋದಾಗ 2 ನೇ ಆರೋಪಿ ಸರ್ಕಾರಿ ಜಾಗವಾದ ಪರಿವೀಕ್ಷಣಾ ದಾರಿಯನ್ನು ಒತ್ತುವರಿ ಮಾಡಿಕೊಂಡು ಟೊಮೋಟೊ ಹಾಕಿಕೊಂಡಿದ್ದರು. ನಾವು ಪರಿಶೀಲನೆ ಮಾಡಿ ಇದನ್ನು ತೆರವುಗೊಳಿಸಬೇಕೆಂದು ಕೇಳಿದಾಗ 2 ನೇ ಆರೋಪಿ ಸರ್ಕಾರಿ ಒತ್ತುವರಿ ಜಾಗವನ್ನು ಬಿಡುವುದಿಲ್ಲವೆಂದು ಹೇಳಿರುತ್ತಾರೆ. ಈ ಸಂಬಂಧ ತಹಶೀಲ್ದಾರ್ ಮತ್ತು ಲೋಕಾಯುಕ್ತ ಕಛೇರಿಯಿಂದಲೂ ಕೂಡ ಆರೋಪಿಗಳ ವಿರುದ್ಧ ದೂರು ನೀಡುವಂತೆ ಅರ್ಜಿ ಬಂದಿದ್ದವು. ಆರೋಪಿಗಳು ಹದ್ದುಬಸ್ತ್ ಕಲ್ಲುಗಳನ್ನು ಕಿತ್ತುಹಾಕಿ ನಾಲಾ ಚರಂಡಿಯನ್ನು ಸಹ ಮುಚ್ಚಿ

ಅಡ್ಡಲಾಗಿ ತಂತಿ ಬೇಲಿ ಹಾಕಿಕೊಂಡಿದ್ದರು. ಇದರಿಂದ ಅಕ್ಕ-ಪಕ್ಕದ ಜಮೀನಿನ ರೈತರಿಗೆ ತೊಂದರೆಯಾಗುತ್ತಿತ್ತು ಮತ್ತು ಅಲ್ಲಿ ಯಾವುದೇ ಪ್ರತ್ಯೇಕ ರಸ್ತೆ ಇರಲಿಲ್ಲ. ಆದ್ದರಿಂದ ಈ ವಿಚಾರವಾಗಿ ಮೇಲಾಧಿಕಾರಿಗಳ ಆದೇಶದಂತೆ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ದೂರಿನ ಜೊತೆ ತಹಶೀಲ್ದಾರ್ ರವರು ನೀಡಿದ್ದ ಕೋರಿಕೆ ಪತ್ರ, ಒಂದು ನಕ್ಷೆಯ ಪ್ರತಿ ಮತ್ತು 4 ಭಾವಚಿತ್ರಗಳನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ತಹಶೀಲ್ದಾರ್ ರವರು ನೀಡಿರುವ ಕೋರಿಕೆ ಪತ್ರದ ಪ್ರತಿ ಮತ್ತು 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 6 ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಆರೋಪಿಗಳ ಕೃತ್ಯದಿಂದ ಸರ್ಕಾರಕ್ಕೆ ನಷ್ಟವುಂಟಾಗಿರುತ್ತದೆ.

ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರು ಮುದ್ದೆ ಮಾಲನ್ನು ಹಾಜರುಪಡಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,
ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ನಂಜನಗೂಡು.